ವಶದಲ್ಲಿ ಬರತಕ್ಕಂಥ ರಸ್ತೆಗಳು ಹಾಗೂ ಜಿಲ್ಲಾಪಂಚಾಯತಿ ವಶದಲ್ಲಿ ಬರತಕ್ಕಂಥ ರಸ್ತೆಗಳನ್ನು ಆದಷ್ಟು ಜಾಗ್ರತೆ ದುರಸ್ಥಿ ಮಾಡಿಸತಕ್ಕಂಥ ಶೀಘ್ರವಾಗಿ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಮಳೆ ಜಾಸ್ತಿ ಬಂದಿರುವಂಥ ಪ್ರದೇಶದಲ್ಲಿ ಈ ರೀತಿ ರಸ್ತೆಗಳು ಹಾಳಾಗಿವೆ ಎನ್ನುವುದನ್ನು ಅನೇಕ ಶಾಸಕರು ಮತ್ತು ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ ಪ್ರಕೃತಿ ವಿಕೋಪ ನಿಧಿಯಿಂದ ನಮಗೆ ಈಗಾಗಲೇ ಬೇರೆ ಬೇರೆ ಜಿಲ್ಲೆಗಳಿಗೆ ವಹಿಸಿಕೊಟ್ಟಿರುವಂಥ ಆಹಾರಧಾನ್ಯಗಳನ್ನು ಉಪಯೋಗಿಸಿ ಅದರ ಮೂಲಕ ತುರ್ತಾಗಿ ಕೆಲಸವನ್ನು ಪ್ರಾರಂಭ ಮಾಡಿ ಎಂದು ಹೇಳಿದ್ದೇವೆ ಆದರೆ ಅದಕ್ಕೆ ಬೇಕಾಗಿರತಕ್ಕಂಥ ನಗದು ಹಣದ ಹೊಂದಾಣಿಕೆ ಇಲ್ಲಿಯವರೆಗೂ ಕೂಡ ಆಗಿಲ್ಲ ಈಗಾಗಲೇ ಉಪ ಮುಖ್ಯಮಂತ್ರಿಗಳ ಜೊತೆಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ ಆ ನಗದು ಹಣವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಈ ಪ್ರಕೃತಿ ವಿಕೋಪ ನಿಧಿಯಿಂದ ಎಷ್ಟು ಸಾಧ್ಯವೋ ಅಷ್ಟನ್ನು ಆಯಾಯ ಜಿಲ್ಲೆಯ ಶಾಸಕರ ಶಿಫಾರಸ್ಸಿನ ಮೇಲೆ ಹಾಳಾಗಿರತಕ್ಕಂಥ ರಸ್ತೆಗಳ ದುರಸ್ತಿ ಕಾರ್ಯವನ್ನು ಕೈಗೊಳ್ಳುತ್ತೇವೆ ಮತ್ತು ಲೆ ೀಕೋಪಯೋಗಿ ಇಲಾಖೆಯ ರಸ್ತೆಗಳ ವಿಚಾರದಲ್ಲಿಯೂ ಕೂಡ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನತಕ್ಕಂಥ ಮಾತನ್ನು ಸದನದಲ್ಲಿ ತಮ್ಮ ಅಪ್ಪಣೆಯ ಮೇರೆಗೆ ಹೇಳಲಿಕ್ಕೆ ಇಷ್ಟಪಡುತ್ತೇನೆ

**ವಿಷಯ (ಖ) ಆಶ್ರಯ ಮನೆಗಳ ರಿಜಿಸ್ಟ್ರೇಷನ್ ಅವಧಿಯನ್ನು ವಿಸ್ತರಿಸುವ ಬಗ್ಗೆ**

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** ಮಾನ್ಯ ಅಧ್ಯಕ್ಷರೆ, ಆಶ್ರಯ ಮನೆಗಳ ವಿತರಣೆಯನ್ನು ಚುನಾವಣೆಯ ಪೂರ್ವದಲ್ಲಿ ನಾವು ಮಾಡಿದ್ದೆವು ಅದಕ್ಕೆ ರಾಜೀವಗಾಂಧಿ ಹೌಸಿಂಗ್ ಕೊ–ಆಪರೇಟೀವ್ ಸೊಸೈಟಿಯಿಂದ ಒಂದು ಸರ್ಕ್ಯುಲರ್ ಹೊರಡಿಸಿ ಮೇ 31ನೇ ತಾರೀಖಿನೊಳಗೆ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳದಿದ್ದರೆ ಅದನ್ನೆಲ್ಲವನ್ನು ಕ್ಯಾನ್ಸಲ್ ಮಾಡುತ್ತೇವೆಂದು ಹೇಳಿದ್ದರೆ ಪುನಃ ಅದನ್ನು ಜೂನ್ 30 ನೇ ತಾರೀಖಿನವರೆಗೆ extend ಮಾಡಿದ್ದಾರೆ ಆದರೆ ಅವರಿಗೆ ರಿಜಿಸ್ಟ್ರೇಷನ್ ಮಾಡಬೇಕಾದರೆ ಆರ್ ಟಿ ಸಿ ಎಲ್ಲವನ್ನೂ ಪಡಯಬೇಕಾಗುತ್ತದೆ ಈ ಚುನಾವಣೆ ಸಂದರ್ಭದಲ್ಲಿ ಕಂದಾಯ ಇಲಾಖಾಧಿಕಾರಿಗಳು ಎಲ್ಲರೂ ಚುನಾವಣೆಯ ಕೆಲಸದಲ್ಲಿದ್ದರು ಆರ್ ಟಿ ಸಿ ಪಡೆಯುವುದು, ರಿಜಿಸ್ಟರ್ ಮಾಡುವುದು ಬಹಳ ತಡವಾಗುತ್ತಿರುವುದರಿಂದ, ಅದನ್ನು ಕ್ಯಾನ್ಸಲ್ ಮಾಡಬಾರದು ಒಂದು ವೇಳೆ ಟೈಂ ಕೊಡುವುದಾದರೆ ಡಿಸೆಂಬರ್‌ವರೆಗೆ ಎಕ್ಸ್‌ಟೆಂಡ್ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳುತ್ತೇನೆ ಏಕೆಂದರೆ, ಕೊಟ್ಟು ಉದ್ದೇಶವೇ ಸಫಲವಾಗುವುದಿಲ್ಲ ಅದಕ್ಕೆ ಗಡಿಯನ್ನು ತೆಗೆದು ಹಾಕಬೇಕು ಇಲ್ಲದಿದ್ದರೆ, ಡಿಸೆಂಬರ್‌ವರೆಗೆ ಆದರೂ ಎಕ್ಸ್‌ಟೆಂಷನ್ ಕೊಡಬೇಕು

**ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)** ಈಗಾಗಲೇ ಅನೇಕ ಶಾಸಕರು ಆಶ್ರಯ ಯೋಜನೆಗಳ ವಿಚಾರದಲ್ಲಿ ಪ್ರಸ್ತಾಪಿಸಿದ್ದಾರೆ ಈಗಾಗಲೇ ನಾವು ನಿರ್ಧಾರ ತೆಗೆದುಕೊಂಡಿದ್ದೇವೆ ಮುಂದೆ ಆಶ್ರಯ ಯೋಜನೆಗಳಾಗಬಹುದು ಅಥವಾ ಅದರ ಸಮಿತಿಯಗಳಾಗಬಹುದು ಅಥವಾ ಆರಾಧನಾ ಸಮಿತಿಗಳಾಗ ಬಹುದು, ಆ ಸಮಿತಿಗಳನ್ನು ಆ ಯಾಯ ತಾಲ್ಲೂಕಿನಲ್ಲಿ, ಆಯಾಯ ಶಾಸಕರ ಅಧ್ಯಕ್ಷತೆಯಲ್ಲಿ ಸಭೆಯನ್ನು, ಸಮಿತಿಯನ್ನು ಮಾ ಡುವ ನಿರ್ಧಾರ ಮಾಡಿದ್ದೇವೆ ಅದರ ಜೊತೆಗೆ, ಸುತ್ತೋಲೆ ಕೂಡ ಹೋಗುತ್ತದೆ ಆದರೆ, ಹಿಂ ಎನ ಬಾರಿ ಯಾರ್ಯಾರು ಫಲಾನುಭವಿಗಳ ಯಾದಿಯನ್ನು ತಯಾರಿಸಿದ್ದಾರೆ, ಅದರಲ್ಲಿ ಕೆಲವು

ಹೊಸ ಶಾಸಕರುಗಳು ಆಕ್ಷೇಪಣೆ ಮಾಡಿದ್ದಾರೆ ಆ ಸಂದರ್ಭದಲ್ಲಿ ಕೂಡ ನಾವು ಸೂಚನೆ ಕಳುಹಿಸಿಕೊಟ್ಟಿದ್ದೇವೆ ಅನರ್ಹ ಫಲಾನುಭವಿಗಳೇನಾದರೂ ಆ ಯಾದಿಯಲ್ಲಿದ್ದರೆ, ಆ ಅನರ್ಹ ಫಲಾನುಭವಿಗಳನ್ನು ನಾವು ವಿಚಾರಣೆ ಮಾಡಿ, ಅವರನ್ನು ತೆಗೆದು ಹಾಕಿ ಎನ್ನುವ ಮಾತನ್ನು ಹೇಳಿದ್ದೇವೆ. ತಾವು ಹೇಳಿದಂತೆ, ಈ ದಿವಸವೇ ನಾವು ರಾಜೀವ್‌ಗಾಂಧಿ ಹೌಸಿಂಗ್ ಕಾರ್ಪೋರೇಷನ್‌ನ ಮಾನ್ಯ ಎಂ ಡಿ ಶ್ರೀಶೈಲಂರವರ ಜೊತೆ ಮಾತನಾಡಿ ಆ ಗಡುವನ್ನು ವಿಸ್ತರಿಸುವ ಕೆಲಸ ಮಾಡುತ್ತೇವೆ ರಿಜಿಸ್ಟ್ರೇಷನ್ ಆಗದಿದ್ದರೆ, ಕೆಲಸವಾಗುವುದಿಲ್ಲವೆನ್ನುವಂಧಾದ್ದಿದೆ ನಾವು ಕೂಡಲೇ ನಮ್ಮ ಗುರಿಯನ್ನು ಮುಟ್ಟಿದಿದ್ದರೆ, ಹುಡ್ಕೋದಿಂದ ಬರುವ ಸಾಲ, ಕೇಂದ್ರ ಸರ್ಕಾರದಿಂದ ಬರುವ ಸಾಲಕ್ಕೂ ತೊಂದರೆಯಾಗುತ್ತದೆ ತಾವು ಹೇಳಿದ ಮಾತಿಗೆ ನಾವು ಗುಡುವನ್ನು ವಿಸ್ತರಿಸಲಿಕ್ಕೆ ಅವರ ಜೊತೆ ಮಾತನಾಡುತ್ತೇವೆ

**ಜ) ವಿಷಯ ಮೈಸೂರಿನಲ್ಲಿ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಎಂಬ ಸಂಸ್ಥೆ ಜಾಹೀರಾತು ನೀಡಿರುವ ಬಗ್ಗೆ**

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** ಇಲ್ಲಿ ಒಂದು ಅಡ್ವರ್‌ಟೈಸ್‌ಮೆಂಟ್ ನೋಡಿ ನಾನು ಇದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ ಮೈಸೂರಿನ ದಳವಾಯಿ ಹೈಸ್ಕೂಲ್ ಕಟ್ಟಡದಲ್ಲಿ ನಡೆಯುತ್ತಿರುವ ರೀಜನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಂಗ್ ಇವರದ್ದು ಒಂದು ಅಡ್ವರ್‌ಟೈಸೆಮೆಂಟ್ ಬಂದಿದೆ ಇದರಲ್ಲಿ ಏನು ಹೇಳುತ್ತಾರೆಂದರೆ, ಇಂಜಿನಿಯರಿಂಗ್‌ಗೆ ಸಮಾನವಾದ ಕೋರ್ಸ್ ಎಂದು ಇವರು ಹೇಳುತ್ತಾರೆ ಅದರಲ್ಲಿ Air Hostess Engineering, Marine Engineering, Electronic Engineering ಎಲ್ಲವನ್ನೂ ಕೊಟ್ಟು ಒಂದು ನೋಟ್ ಅನ್ನು ಕೊಡುತ್ತಾರೆ ಫೀಸ್ ಎಲ್ಲಾ ಹಾಕಿ, The above Engineering courses are recognised by Government of India and all the state Governments as equivalent to B E degree in Engineering ಎಂದು ಹಾಕುತ್ತಾರೆ ಇದರ ಸತ್ಯಾಸತ್ಯತೆ ಬಗ್ಗೆ ತಿಳಿದುಕೊಳ್ಳಬೇಕು ಏಕೆಂದರೆ, ಮುಗ್ಧ ಮಕ್ಕಳು ಅಲ್ಲಿ ಹೋಗಿ ಫೀಸ್ ಕಟ್ಟಿ, ಕೆಲವು ದಿವಸ ಕೋರ್ಸಿಗೆ ಹೋಗಿ, ನಂತರ ಬೋಗಸ್ ಎಂದು ಆದರೆ ಅದರಿಂದ ದೊಡ್ಡ ಸಮಸ್ಯೆ ಉದ್ಭವವಾಗುತ್ತದೆ ಅವರೇನು ಹೇಳುತ್ತಾರೆಂದರೆ, ಈ ಸಿ ಇ ಟಿ ಪ್ರಾಬ್ಲಂ ಇದ್ದದ್ದರಿಂದ, ಇದನ್ನು ಪ್ರಾರಂಭ ಮಾಡಿದ್ದೇವೆ ಎಂದು ಹೇಳುತ್ತಾರೆ ಅದಕ್ಕೋಸ್ಕರ ದಯವಿಟ್ಟು ಸರ್ಕಾರದವರು ಇದರ ಬಗ್ಗೆ ಗಮನಹರಿಸಬೇಕು ಒಂದು ವೇಳೆ ರೆಕಗ್ನೈಸ್ಡ್ ಆದರೆ ನಾವು ಅದರ ಬಗ್ಗೆ ಆತಂಕ ಪಡುವುದಿಲ್ಲ ಆದರೆ, ಅದು ರೆಕಗ್ನೈಸ್ಡ್ ಹೌದೋ, ಅಲ್ಲವೋ? ಒಂದು ವೇಳೆ Whether is is equivalent to B E ? ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು, ಸುಳ್ಳಾದರೆ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇವೆ

**ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)** ಇದರ ಬಗ್ಗೆ ನಮಗೆ ಯಾವುದೇ ಖಚಿತವಾದ ದೂರು ಬಂದಿಲ್ಲ ಅವರು ಅನ್-ರೆಕಗ್ನೈಸ್ಡ್ ಕಾಲೇಜು ಪ್ರಾರಂಭ ಮಾಡಿದ್ದರೆ, ಪೇರೆಂಟ್ಸ್ ಅನ್ನು ತಪ್ಪುದಾರಿಗೆ ಎಳೆದಿದ್ದರೆ ಎಳೆದಿದ್ದರೆ, ಅದಕ್ಕೆ ನಾವು ಜವಾಬ್ದಾರರಲ್ಲ ನಮಗೆ ಇಲ್ಲಿಯವರೆಗೆ ಯಾವುದೇ ದೂರು ಬಂದಿಲ್ಲ

**ಶ್ರೀ ಕೆ ಜಯಪ್ರಕಾಶ್ ಹೆಗ್ಡೆ** ಅವರು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದಾರೆ

**ಶ್ರೀ ಕೆ ಆರ್ ರಮೇಶ್ ಕುಮಾರ್ (ಶ್ರೀನಿವಾಸಪುರ)** ತಾವು ಹಿರಿಯರಾಗಿ ಈ ರೀತಿ ಹೇಳಬಾರದು